ಶೌಚಾಲಯ ವ್ಯವಸ್ಥೆ ಮತ್ತು ನಾಲ್ಕು ವಸತಿಗೃಹಗಳಿಗೆ ಒಂದರಂತೆ ನೀರು ಸರಬರಾಜು ಕೊಳಾಯಿ ವ್ಯವಸ್ಥೆ ಕಲ್ಪಿಸಲಾಗಿದೆ. ವಿದ್ಯುತ್, ರಸ್ತೆ, ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ.

ಈ) ಕಾರಾಗೃಹಗಳ ಆಧುನೀಕರಣ 2ನೇ ಹಂತದ ಪರ್‌ಸ್ಪೆಕ್ಟಿವ್ ಯೋಜನೆ ಅಡಿಯಲ್ಲಿ 40 ಸಂಖ್ಯೆ ಹೊಸ ವಸತಿಗೃಹಗಳನ್ನು ಅಗತ್ಯ ಮೂಲಭೂತ ಸೌಕರ್ಯಗಳೊಂದಿಗೆ ನಿರ್ಮಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಡಿ ಸಿ ಸಿ ಬ್ಯಾಂಕ್ ಜ್ಯೂಬಿಲಿ ಆಚರಣೆ

197(304) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:(ಜಮಖಂಡಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಡಿ.ಸಿ.ಸಿ. ಬ್ಯಾಂಕ್‌ನವರು ವಜ್ರಮಹೋತ್ಸವ ಕಾರ್ಯಕ್ರಮದ ಆಚರಣೆಗಾಗಿ 1993ರಲ್ಲಿ ಅಖಂಡ ಜಿಲ್ಲೆಯ ಸಹಕಾರ ಸಂಘಗಳಿಂದ (VSS) ಹಣ ಸಂಗ್ರಹಿಸಲಾಗಿದೆಯೇ? ಹಾಗಿದ್ದಲ್ಲಿ ಸಂಗ್ರಹಿಸಿದ ಹಣವೆಷ್ಟು?

ಆ) ಈ ಕಾರ್ಯಕ್ರಮ ನಡೆದಿಲ್ಲವಾದ್ದರಿಂದ ಸಂಗ್ರಹಿಸಿದ ಹಣವನ್ನು ಆಯಾ ಸಂಘಗಳಿಗೆ ಹಿಂದಿರುಗಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಲಕ್ಷ್ಮಣ ಸ ಸವದಿ(ಸಹಕಾರ ಸಚಿವರು):

ಅ) ಅವಿಭಜಿತ ಬಿಜಾಪುರ ಜಿಲ್ಲೆಯ ವ್ಯವಸಾಯ ಸೇವಾ ಸಹಕಾರ ಸಂಘಗಳಿಂದ ಹಾಗೂ ಇತರೆ ಸಹಕಾರ ಸಂಘ/ಸಂಸ್ಥೆಗಳಿಂದ ವಜ್ರ ಮಹೋತ್ಸವ ಸವಿನೆನಪಿನ ಸಂಚಿಕೆಗಾಗಿ ರೂ.51,82,000/– ವಂತಿಗೆ ಸಂಗ್ರಹಣ ಮಾಡಿರುತ್ತಾರೆ.

ಆ) ಈ ಕಾರ್ಯಕ್ರಮ ನಡೆದಿಲ್ಲವಾದ್ದರಿಂದ ಮತ್ತು ಬಿಜಾಪುರ ಜಿಲ್ಲೆ ವಿಭಜನೆಯಾಗಿ ಪ್ರತ್ಯೇಕ ಎರಡು ಬ್ಯಾಂಕುಗಳು ಅಗಿರುವುದರಿಂದ ಸಂಗ್ರಹಿಸಿದ ಹಣವನ್ನು ಆಯಾ ಸಂಘಗಳಿಗೆ ಹಿಂದಿರುಗಿಸಲು ಬ್ಯಾಂಕಿಗೆ ಸೂಚನೆ ನೀಡಲಾಗಿದೆ.

ಭದ್ರಾ ನದಿ ನೀರು ಕಲುಷಿತ

198(310) ಶ್ರೀ ಕುಮಾರಸ್ವಾಮಿ ಕೆ ಜಿ:(ಶಿವಮೊಗ್ಗ ಗ್ರಾಮಾಂತರ) ಮಾನ್ಯ ಬಂದರು, ಒಳನಾಡು ಜಲಸಾರಿಗೆ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾವತಿ ತಾಲ್ಲೂಕು ಸೀಗೆಬಾಗಿಯಿಂದ ಕೂಡ್ಲಿ ಸಮೀಪ ಭದ್ರಾನದಿ ತಂಗಾನದಿ ಸೇರಿ ಹರಿಯುತ್ತಿದ್ದು, ಪರಿಸರ ನೀತಿಗೆ ವಿರುದ್ದವಾಗಿ ನದಿ ಕಲುಷಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, 1974ರ ಜಲಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕಾಯಿದೆ ಅನ್ವಯ ನಿಗದಿಪಡಿಸಿದ ಮಾನದಂಡಗಳೇನು;

ಇ) ಈ ನದಿಯ ನೀರು ಬಳಕೆಗೆ, ಕುಡಿಯಲು ಬಾರದಂತೆ ಹೆಸರಿಸಲಾದ ಹಳ್ಳಿಗಳು ಯಾವುವು?

ಶ್ರೀ ಜೆ ಕೃಷ್ಣ ಪಾಲೇಮಾರ್(ಬಂದರು, ಒಳನಾಡು ಜಲಸಾರಿಗೆ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಹೌದು

ಆ) ಜಲಮಾಲಿನ್ಯ (ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974ರ ಅಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪುರಸಭೆಗಳಿಂದ ಹೊರಹೊಮ್ಮುವ ಗ್ರಾಮಸಾರಕ್ಕೆ ಗುಣ ಮಾನಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸಿದೆ.

ಇ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಯಾವುದೇ ಹಳ್ಳಿಯನ್ನು ನದಿಯ ನೀರನ್ನು ಕುಡಿಯುವುದರಿಂದ ಮತ್ತು ಇತರೆ ಬಳಕೆ. ನಿಷೇದಿಸುವುದಿಲ್ಲ.

ಈ ಕಲುಷಿತ ತಡೆಗಟ್ಟಲು ಕಳೆದ ಮೂರು ವರ್ಷಗಳಿಂದ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

(1) ಶಿವಮೊಗ್ಗ ಪಟ್ಟಣದ ಗ್ರಾಮಸಾರವನ್ನು ಶುದ್ಧೀಕರಿಸಲು ರಾಷ್ಟ್ರೀಯ ನದಿ ಕ್ರಿಯಾ ಯೋಜನೆಯಡಿಯಲ್ಲಿ ಸಂಸ್ಕರಣ ಘಟಕದ ಕಾಮಗಾರಿ ಹಾಗೂ ಒಳಚರಂಡಿ ಕಾಮಗಾರಿ ಪ್ರಗತಿಯಲ್ಲಿದೆ.

(2) ಭದ್ರಾವತಿ ಫಟ್ಟಣಕ್ಕೆ ಒಳ ಚರಂಡಿ ನಿರ್ಮಾಣ ಪ್ರಗತಿಯಲ್ಲಿದೆ, ರೊಚ್ಚು ನೀರಿನ ಶುದ್ಧೀಕರಣ ಘಟಕದ ಕಾಮಗಾರಿಯನ್ನು ರಾಷ್ಟ್ರೀಯ ನದಿ ಕ್ರಿಯಾ ಯೋಜನೆಯಡಿಯಲ್ಲಿ ಅಳವಡಿಸಲಾಗಿದೆ.

(3) ಈ ಸಂಸ್ಕರಣ ಘಟಕಕ್ಕೆ ರೊಚ್ಚು ನೀರನ್ನು ಸಂಗ್ರಹಿಸಿ ಪಂಪ್ ಮಾಡಲು ನಾಲ್ಕು ವೆಟ್‌ವೆಲ್‌ಗಳ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಈ ಎಲ್ಲಾ ಕೆಲಸಗಳನ್ನು KUW & DB ಯು ನಿರ್ವಹಿಸುತ್ತಿದೆ.

(4) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಾರ್ಖಾನೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಹೊರ ಹಾಕುವ ಮೊದಲು ನಿಗದಿತ ಮಟ್ಟಕ್ಕೆ ಸಂಸ್ಕರಿಸುವ ಕಾರ್ಯವನ್ನು ಮೇಲುಸ್ತುವಾರಿ ವಹಿಸುತ್ತದೆ.

ರಸ್ತೆ ಅಭಿವೃದ್ಧಿ

199(396) ಶ್ರೀ ಕುಮಾರಸ್ವಾಮಿ ಕೆ ಜಿ:(ಶಿವಮೊಗ್ಗ ಗ್ರಾಮಾಂತರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಮತ್ತು ಭದ್ರಾವತಿ ತಾಲ್ಲೂಕುಗಳಲ್ಲಿ ಎಷ್ಟು ಕಿ.ಮೀ. ರಸ್ತೆಯನ್ನು 2007–08, 2008–09 ಮತ್ತು 2009–10ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲಾಗಿದೆ; ಇದಕ್ಕಾಗಿ ವೆಚ್ಚ ಮಾಡಿರುವ ಮೊತ್ತವೆಷ್ಟು? (ಲೆಕ್ಕ ಶೀರ್ಷಿಕೆವಾರು ರಸ್ತೆ ಹೆಸರು, ಕಿ.ಮೀ., ಇತ್ಯಾದಿ ವಿವರ ಒದಗಿಸುವುದು)

ಆ) ಅಭಿವೃದ್ಧಿಪಡಿಸಿದ ರಸ್ತೆಗಳ ಪೈಕಿ ಎಷ್ಟು ರಸ್ತೆಗಳು ಕಳಪೆ ಕಾಮಗಾರಿ ಗುಣಮಟ್ಟದಿಂದ ಹಾಳಾಗಿವೆ ಎಂದು ಸಾರ್ವಜನಿಕರು ಇಲಾಖೆಗೆ ದೂರು ನೀಡಿದ್ದಾರೆ? ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಇ) ಈ ರಸ್ತೆಗಳನ್ನು ಆದ್ಯತೆ ಮೇರೆಗೆ ತುರ್ತು ದುರಸ್ತಿ ಮಾಡಿಸಲು ಸರ್ಕಾರ ರೂಪಿಸಿರುವ ಕಾರ್ಯ ಯೋಜನೆಗಳೇನು (ವಿವರ ನೀಡುವುದು)?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಶಿವಮೊಗ್ಗ ಮತ್ತು ಭದ್ರಾವತಿ ತಾಲ್ಲೂಕುಗಳಲ್ಲಿ 2007–08, 2008–09 ಮತ್ತು 2009–10ನೇ ಸಾಲಿನಲ್ಲಿ ರಸ್ತೆ ಅಭಿವೃದ್ಧಿಪಡಿಸಲಾಗಿದ್ದು, ಇದಕ್ಕಾಗಿ ಮಾಡಲಾಗಿರುವ ಖರ್ಚು ವೆಚ್ಚ ಹಾಗೂ ವಿವರಗಳು ಈ ಕೆಳಕಂಡಂತಿರುತ್ತದೆ.

ತಾಲ್ಲೂಕು	ವರ್ಷ	ಅಭಿವೃದ್ಧಿಪಡಿಸಲಾದ	ಆದ ವೆಚ್ಚ